# ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ (ಸಿ.ಎಮ್. ಡಿ.ಆರ್)

ಡಾ. ಬಿ.ಆರ್. ಅಂಬೇಡ್ಕರ್ ನಗರ, ಧಾರವಾಡ – **580004**

**ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ, ಯುವ ಸಂಶೋಧಕರು, ವಿದ್ಯಾವಂತರ ಹಾಗೂ ಶಿಕ್ಷಕರಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ 2026ರ ಮೇ 14ರಂದು**

# "ಸಂಶೋಧನಾ ಪ್ರಸ್ತಾವನಾ ಪ್ರಸ್ತುತಿ ಸ್ಪರ್ಧೆ"

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ (CMDR), ಧಾರವಾಡವು ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ, ಯುವ ಸಂಶೋಧಕರು, ವಿದ್ಯಾವಂತರ ಹಾಗೂ ಶಿಕ್ಷಕರಲ್ಲಿ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ 2026ರ ಮೇ 14ರಂದು ಬೆಳಿಗ್ಗೆ 10.00 ಗಂಟೆಗೆ ಕೇಂದ್ರದ ಸಭಾಂಗಣದಲ್ಲಿ "ಸಂಶೋಧನಾ ಪ್ರಸ್ತಾವನಾ ಪ್ರಸ್ತುತಿ ಸ್ಪರ್ಧೆ"ಯನ್ನು ಆಯೋಜಿಸಿತ್ತು.

ಕಾರ್ಯಕ್ರಮಕ್ಕೆ ತೀರ್ಪುಗಾರರಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಮನೋವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಡಾ. ತ್ರಿವೇಣಿ ಎಸ್., ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ರಂಗಸ್ವಾಮಿ ಡಿ. ನಾಯಕ್ ಹಾಗೂ ಭಾರತೀಯ ತಾಂತ್ರಿಕ ಸಂಸ್ಥೆ (IIT) ಯ ಪ್ರಾಧ್ಯಾಪಕರಾದ ಡಾ. ಗೋಪಾಲ್ ಶರಣ್ ಪರಾಶರಿ ಅವರನ್ನು ಆಹ್ವಾನಿಸಲಾಗಿತ್ತು.

ಮಾನ್ಯ ತೀರ್ಪುಗಾರರು ಈ ಕಾರ್ಯಕ್ರಮವನ್ನು ಅತ್ಯಂತ ಮೆಚ್ಚುಗೆ ವ್ಯಕ್ತಪಡಿಸಿ, ಸಂಶೋಧನಾ ಪ್ರಸ್ತಾವನಾ ಪ್ರಸ್ತುತಿ ಸ್ಪರ್ಧೆಯು ಯುವ ಸಂಶೋಧಕರಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಪರಿವರ್ತನಾ ದೃಷ್ಟಿಕೋಣವನ್ನು ಅರ್ಥೈಸಿಕೊಳ್ಳಲು ಮತ್ತು ಚರ್ಚಿಸಲು ಮಹತ್ವದ ಶೈಕ್ಷಣಿಕ ವೇದಿಕೆಯನ್ನು ಒದಗಿಸುತ್ತದೆ ಎಂದು ಅಭಿಪ್ರಾಯಪಟ್ಟರು. ಬಂದ ಪ್ರಸ್ತಾವನೆಗಳ ಉನ್ನತ ಗುಣಮಟ್ಟ ಹಾಗೂ ವಿಶ್ಲೇಷಣಾತ್ಮಕ ಆಳವನ್ನು ಅವರು ಶ್ಲಾಘಿಸಿದರು. ಇಂತಹ ಕಾರ್ಯಕ್ರಮಗಳು ಸಾಮಾಜಿಕ ನ್ಯಾಯ ಮತ್ತು ಸಮಾವೇಶಿತ ಅಭಿವೃದ್ಧಿಯ ಕುರಿತು ತತ್ವಾಧಾರಿತ ಸಂಶೋಧನೆ ಹಾಗೂ ವಿಮರ್ಶಾತ್ಮಕ ಚಿಂತನೆಗೆ ಉತ್ತೇಜನ ನೀಡುತ್ತವೆ ಎಂದು ತಿಳಿಸಿದರು. ಸಂವಿಧಾನಾತ್ಮಕ ಆದರ್ಶಗಳು ಮತ್ತು ಸಮಕಾಲೀನ ಶೈಕ್ಷಣಿಕ ಚರ್ಚೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ ಅರ್ಥಪೂರ್ಣ ಬೌದ್ಧಿಕ ಚಟುವಟಿಕೆಗಳನ್ನು ನಿರಂತರವಾಗಿ ಆಯೋಜಿಸುತ್ತಿರುವ ಕೇಂದ್ರದ ಪ್ರಯತ್ನವನ್ನು ಅವರು ಪ್ರಶಂಸಿಸಿದರು.

ಸಿ.ಎಮ್.ಡಿ.ಆರ್ ಸಂಸ್ಥೆಯ ಕು.ಶ್ವೇತಾ ನೀಲಣ್ಣವರ ಅವರು "ಗ್ರಾಮೀಣ ಮಹಿಳೆಯರಲ್ಲಿ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಅಭಿವೃದ್ಧಿ: ಕಲ್ಯಾಣ ಕರ್ನಾಟಕದ ಆಧಾರಿತ ಅಧ್ಯಯನ" ಎಂಬ ವಿಷಯದ ಸಂಶೋಧನಾ ಪ್ರಸ್ತಾವನೆಯನ್ನು ಮಂಡಿಸಿ ರೂ.10,000/- ನಗದು ಬಹುಮಾನ ಸಮೇತ ಪ್ರಥಮ ಬಹುಮಾನವನ್ನು ಪಡೆದರು.

ಸ್ವಾಮಿ ವಿವೇಕಾನಂದ ಯುಥ್ ಮೂಮೆಂಟ ಇಂದ ಡಾ. ಮೋಹನ್ ತಂಬಾಡ ಅವರು "ಪ್ಯಾಲಿಯೇಟಿವ್ ಕೇರ್‌ನಲ್ಲಿ ಆರೈಕೆದಾರರು, ಕುಟುಂಬ ಸದಸ್ಯರು ಹಾಗೂ ಸ್ವಯಂಸೇವಕರ ತರಬೇತಿ ಮತ್ತು ಆರೈಕೆ ಹೊರೆ ಮೌಲ್ಯಮಾಪನ: ರೋಗಿಗಳು ಮತ್ತು ಆರೈಕೆದಾರರ ಜೀವನಮಟ್ಟ ಸುಧಾರಣೆಗೆ ಬಹುಕೇಂದ್ರ ಅಧ್ಯಯನ" ಎಂಬ ಸಂಶೋಧನಾ ಪ್ರಸ್ತಾವನೆಯನ್ನು ಮಂಡಿಸಿದರು.

DIMHANSನ ಡಾ. ಅಶೋಕ್ ಕೋರಿ ಅವರು "ಧಾರವಾಡ ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗಾಗಿ ಆತ್ಮಹತ್ಯೆ ತಡೆ ಕಾರ್ಯಕ್ರಮ" ಎಂಬ ಸಂಶೋಧನಾ ಪ್ರಸ್ತಾವನೆಯನ್ನು ಮಂಡಿಸಿದರು, ಡಾ. ಮೋಹನ್ ತಂಬಾಡ ಮತ್ತು ಡಾ. ಅಶೋಕ್ ಕೋರಿ ಯವರಿಗೆ ದ್ವಿತಿಯ ಬಹುಮಾನ ತಲಾ ರೂ. ೭೦೦೦/- ನಿಡಲಾಯಿತು.

ಧಾರವಾಡದ ಕೃಷಿ ವಿ.ವಿ ದ ಶ್ರೀ ಸುನೀಲ್ ಗರಗ್ ಅವರು "ಆಧುನಿಕ ಭಾರತದಲ್ಲಿ ಜಾತಿ ಇನ್ನೂ ಅವಕಾಶಗಳನ್ನು ಪ್ರಭಾವಿಸುತ್ತಿದೆಯೇ? ಯುವಕರಲ್ಲಿ ಕಲ್ಪನೆ ಮತ್ತು ವಾಸ್ತವದ ಅಧ್ಯಯನ" ಎಂಬ ಸಂಶೋಧನಾ ಪ್ರಸ್ತಾವನೆಯನ್ನು ಮಂಡಿಸಿ ರೂ.5,000/- ನಗದು ಬಹುಮಾನ ಸಮೇತ ತೃತೀಯ ಬಹುಮಾನವನ್ನು ಪಡೆದರು.

CMDRನ ನಿರ್ದೇಶಕರಾದ ಪ್ರೊ. ಬಸವಪ್ರಭು ಜಿರ್ಲಿ ಅವರು ಕಾರ್ಯಕ್ರಮದ ಉದ್ದೇಶಗಳು ಹಾಗೂ ಯುವ ಸಂಶೋಧಕರು ಮತ್ತು ವಿದ್ಯಾವಂತರ ಸಾಮರ್ಥ್ಯ ವೃದ್ಧಿಯಲ್ಲಿ ಇದರ ಉಪಯೋಗಿತೆಯನ್ನು ವಿವರಿಸಿದರು. ಡಾ. ಜ್ಯೈ ಪ್ರಭಾಕರ್ ಎಸ್.ಸಿ., ಸಹ ಪ್ರಾಧ್ಯಾಪಕರು ಸ್ವಾಗತಿಸಿದರು ಮತ್ತು ಡಾ. ಎಸ್.ವಿ. ಹನಗೋಡಿಮಠ, ಸಹಾಯಕ ಪ್ರಾಧ್ಯಾಪಕರು ವಂದನಾರ್ಪಣೆ ಸಲ್ಲಿಸಿದರು. ಡಾ. ಟಿ. ಬ್ರಹ್ಮಾನಂದಂ, ಡಾ. ಅರುಣಕುಮಾರ್ ಕುಲಕರ್ಣಿ, ಡಾ. ದುಂಡಪ್ಪ ವೈ. ಬಡ್ಲಕ್ಕನವರ್ ಮತ್ತು ಡಾ. ಪ್ರತೀಕ್ ಮಾಳಿ ಉಪಸ್ಥಿತರಿದ್ದರು.







